# ಕರ್ನಾಟಕ ಲೋಕಾಯುಕ್ತ

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿ.ಎಂ./3533/2021
ಪಿ.ಓ.ಎ.ಆರ್.ಇ–06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 09/09/2022.

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ**

ವಿಷಯ: **ಶ್ರೀ. ಮಹಮದ್‌ರಫೀಕ್ ಮಹಿಬೂಬ ಗೊಳಸಂಗಿ ಬಿನ್ ಮಹಿಬೂಬ ಗೊಳಸಂಗಿ, ಪ್ರಥಮ ದರ್ಜೆ ಸಹಾಯಕ, ತಹಶೀಲ್ದಾರ್ ಕಚೇರಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ**ರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.

****

1. ವಿಜಯಪುರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ಮಹಮದ್‌ರಫೀಕ್ ಮಹಿಬೂಬ ಗೊಳಸಂಗಿ ಬಿನ್ ಮಹಿಬೂಬ ಗೊಳಸಂಗಿ, ಪ್ರಥಮ ದರ್ಜೆ ಸಹಾಯಕ, ತಹಶೀಲ್ದಾರ್ ಕಚೇರಿ, ವಿಜಯಪುರ ತಾಲ್ಲೂಕು, ವಿಜಯಪುರ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). **ಶ್ರೀ. ಶಬೀರ್ ಅಹಮದ್ ಬಿನ್ ಇಲಾಹಿ ಅತ್ತಾರ, ಪೊಲೀಸ್ ಹೆಡ್ ಕಾನ್ಸ್‌ಟೇಬಲ್, ಜಿಲ್ಲಾ ಸಶಸ್ತ್ರ ದಳ, ವಿಜಯಪುರ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:–**

i) ದೂರುದಾರರಾದ **ಶ್ರೀ. ಶಬೀರ್ ಅಹಮದ್ ಬಿನ್ ಇಲಾಹಿ ಅತ್ತಾರ**ರವರಿಗೆ 2004ನೇ ಇಸವಿಯಲ್ಲಿ ಅಬ್ದುಲ್ ಖಾದರ್ ಜಿಲಾನಿ ಬಿನ್ ಸೈಯದ್ ರಸೂಲ ಇನಾಂದಾರ್‌ರವರ ಹೆಸರಿನಲ್ಲಿರುವ ವಿಜಯಪುರ ಮಹಾಲ ಭಾಗಯತ ಸರ್ವೆ ನಂ.445/*/2 ರಲ್ಲಿ ಕ್ಷೇತ್ರ 3 ಗುಂಟೆ 8 ಆಣೆ ಜಾಗವನ್ನು

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿ.ಎಂ./3533/2021
ಪಿ.ಓ.ಎ.ಆರ್.ಇ–06

ಭಕ್ಷೀಸ್ ಪತ್ರದ ಮೂಲಕ ದೂರುದಾರರ ಹೆಸರಿಗೆ ನೀಡಿದ್ದು ಇರುತ್ತದೆ. 2016ನೇ ಸಾಲಿನಲ್ಲಿ ದೂರುದಾರರು ಪಹಣಿ ಪತ್ರಿಕೆಯನ್ನು ತೆಗೆಸಿದ್ದು ಅದರಲ್ಲಿ ಸದರಿ ಸರ್ವೆ ನಂಬರಿನ ಕ್ಷೇತ್ರ 3 ಗುಂಟೆ 8 ಆಣೆ ಅಂತ ನಮೂದಾಗಿರುತ್ತದೆ. ನಂತರ 2018ರಲ್ಲಿ ದೂರುದಾರರ ಹೆಸರಿನಲ್ಲಿರುವ ಮಹಾಲ ಭಾಗಯತ ಸರ್ವೆ ನಂ.445/*/2 ರ ಪಹಣಿ ಪತ್ರಿಕೆ ತೆಗೆಸಿದಾಗ ಅದರಲ್ಲಿನ ಕ್ಷೇತ್ರ 3 ಗುಂಟೆ 8 ಆಣೆ ಬದಲಾಗಿ 2 ಗುಂಟೆ 8 ಆಣೆ ಅಂತ ನಮೂದಾಗಿರುತ್ತದೆ. ಆ ಕಾರಣ, ದೂರುದಾರರು ದಿ: 01/04/2019ರಂದು ತಹಶೀಲ್ದಾರ್, ವಿಜಯಪುರರವರಿಗೆ ಮಹಾಲ ಭಾಗಯತ ಸರ್ವೆ ನಂ.445/*/2ರ "ಡ" ಉತಾರೆಯಲ್ಲಿ ಕ್ಷೇತ್ರ 3 ಗುಂಟೆ 8 ಆಣೆ ಇದ್ದು, ಪಹಣಿ ಪತ್ರಿಕೆಯಲ್ಲಿ ಸರಿಪಡಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ನಂತರ ದೂರುದಾರರು ವಿಜಯಪುರ ತಹಶೀಲ್ದಾರ್ ಕಚೇರಿಗೆ ಹೋಗಿ ಅಲ್ಲಿನ ತಲಾಟಿರವರನ್ನು ಭೇಟಿಯಾಗಿ ಅರ್ಜಿ ಬಗ್ಗೆ ವಿಚಾರಿಸಿದಾಗ, ಲೋಕಸಭಾ ಚುನಾವಣೆ ಇದ್ದುದರಿಂದ ಕೆಲಸ ಆಗಿಲ್ಲವೆಂದು ತಿಳಿಸಿರುತ್ತಾರೆ. ನಂತರ, ದಿ: 16/07/2019ರಂದು ದೂರುದಾರರು ಖುದ್ದಾಗಿ ವಿಜಯಪುರ ಆರ್.ಐ. ಕಚೇರಿಗೆ ಹೋದಾಗ ಆರ್.ಐ.ರವರು ಇರದ ಕಾರಣ, ಅಲ್ಲಿದ್ದ ತಲಾಟಿರವರನ್ನು ವಿಚಾರಿಸಿದಾಗ ತಲಾಟಿರವರು ದೂರುದಾರರ ವರದಿಗೆ ಆರ್.ಐ.ರವರು ಸಹಿಮಾಡಿಕೊಟ್ಟಿದ್ದು ತಯಾರಿದೆ ಅಂತ ವರದಿ ಕೊಟ್ಟರು. ದೂರುದಾರರು ಮರುದಿನ ದಿ: 18/07/2019ರಂದು ಆರ್.ಐ. ಸಾಹೇಬರು ಸಹಿ ಮಾಡಿದ್ದ ವರದಿಯನ್ನು ತೆಗೆದುಕೊಂಡು ವಿಜಯಪುರ ತಹಶೀಲ್ದಾರ್ ಕಚೇರಿಗೆ ಬಂದು ಅಲ್ಲಿನ ಕೇಸ್‌ವರ್ಕರ್ / ಎದುರುದಾರರನ್ನು ಭೇಟಿಮಾಡಿ ಆರ್.ಐ.ರವರು ವರದಿಯನ್ನು ನೀಡಿದ ಬಗ್ಗೆ ತಿಳಿಸಿದಾಗ ಅದನ್ನು ಕಚೇರಿಯ ಇನ್‌ವಾರ್ಡ್‌ನಲ್ಲಿ ಕೊಡುವಂತೆ ತಿಳಿಸಿರುತ್ತಾರೆ ಹಾಗೂ ದೂರುದಾರರಿಗೆ ಸೋಮವಾರ ಬನ್ನಿ ಮಾತನಾಡೋಣ ಅಂತ ಹೇಳಿ ಕಳುಹಿಸಿರುತ್ತಾರೆ. ದೂರುದಾರರು ದಿ: 22/07/2019ರಂದು 12.30 ಗಂಟೆಗೆ ಎದುರುದಾರರನ್ನು ಭೇಟಿಯಾಗಿದ್ದು, ಆಗ ಎದುರುದಾರರು ದೂರುದಾರರನ್ನು ಚಹಾದ ಅಂಗಡಿಯ ಹತ್ತಿರ ಕರೆದುಕೊಂಡು ಹೋಗಿ, ಅವರ ಕೆಲಸ ಮಾಡಿಕೊಡಲು 5,000/– ರೂ. ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಈಗಿದ್ದರೆ ಕೊಟ್ಟುಬಿಡಿ ಬೇಗನೆ ನಿಮ್ಮ ಫೈಲ್ ಪುಟ್‌ಅಪ್ ಮಾಡುತ್ತೇನೆ ಅಂತ ಹೇಳಿರುತ್ತಾರೆ. ಆಗ ದೂರುದಾರರು ಅಷ್ಟಾಗುವುದಿಲ್ಲ ಕಡಿಮೆ ಮಾಡಿ ಎಂದು ಹೇಳಿದಾಗ ಎದುರುದಾರರು 4,000/– ರೂ. ಲಂಚದ ಹಣ ನೀಡಿರಿ, ದುಡ್ಡು ಕೊಡಲಿಲ್ಲ ಅಂದರೆ ಮೇಡಂರವರು ಸಹಿಮಾಡುವುದಿಲ್ಲ ಅಂತ ಹೇಳಿರುತ್ತಾರೆ. ದಿ: 22/07/2019ರಂದು ಸಂಜೆ 4.30ಕ್ಕೆ ದೂರುದಾರರು

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿ.ಎಂ./3533/2021
ಪಿ.ಓ.ಎ.ಆರ್.ಇ–06

ಎದುರುದಾರರ ಬಳಿ ಬಂದಾಗ, ಎದುರುದಾರರು ಆಫೀಸ್ ಮೀಟಿಂಗ್‌ಗೆ ಹೋಗಿದ್ದು, ನಂತರ ತಹಶೀಲ್ದಾರ್ ಕಚೇರಿಯ ಕಾಂಪೌಂಡ್ ಗೇಟ್ ಬಳಿ ಬರುತ್ತಿರುವಾಗ್ಗೆ, ದೂರುದಾರರು ಎದುರುದಾರರನ್ನು ನಿಲ್ಲಿಸಿ, ಅವರ ಕೆಲಸದ ಬಗ್ಗೆ ವಿಚಾರಿಸಿದಾಗ ಎದುರುದಾರರು ದೂರುದಾರರ ಕೆಲಸ ಮಾಡಿಕೊಡಲು 4,000/– ರೂ. ಲಂಚದ ಹಣಕ್ಕೆ ಒತ್ತಾಯಿಸಿರುತ್ತಾರೆ. ದೂರುದಾರರು ಅವರ ಬಳಿಯಿದ್ದ 1,000/– ರೂ. ಹಣವನ್ನು ಎದುರುದಾರರಿಗೆ ನೀಡಿದಾಗ, ಎದುರುದಾರರು ಪಡೆದು ಇನ್ನು 3,000/– ರೂ. ಕೊಡಬೇಕಾಗುತ್ತದೆ ಎಂದು ಬೇಡಿಕೆ ಇಟ್ಟಿರುತ್ತಾರೆ. ಅವರಿಬ್ಬರ ನಡುವೆ ಆದ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ ದೂರುದಾರರು ದಿ: 24/07/2019ರಂದು ವಿಜಯಪುರ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರಿಗೆ ಲಿಖಿತ ದೂರನ್ನು ನೀಡಿದ್ದು, ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.10/2019 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (ತಿದ್ದುಪಡಿ ಕಾಯಿದೆ, 2018) ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 24/07/2019ರಂದು ತನಿಖಾಧಿಕಾರಿಯವರು ಜಪ್ತಿ ಪೂರ್ವದ ಪಂಚನಾಮೆ ಸಮಯದಲ್ಲಿ ಪಂಚಸಾಕ್ಷಿದಾರರುಗಳಾದ 1) ಶ್ರೀ. ಸುಮಿತಸಿಂಗ್ ಬಿನ್ ರಾಜೇಂದ್ರಸಿಂಗ್ ರಜಪೂತ, 33 ವರ್ಷ, ದ್ವಿ.ದ.ಸ., ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ವಿಜಯಪುರ ಮತ್ತು 2) ಶ್ರೀ. ಶಾಂತಪ್ಪ ಬಿನ್ ಮಲ್ಲಪ್ಪ ಬಿರಾದಾರ, 57 ವರ್ಷ, ಸಹಾಯಕ ನಿರ್ದೇಶಕರು, ಪಶು ಸಂಗೋಪನೆ ಇಲಾಖೆ, ವಿಜಯಪುರ ಇವರುಗಳನ್ನು ಠಾಣೆಗೆ ಕರೆಯಿಸಿ, ಅವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ತಿಳಿಸಿದ ನಂತರ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ ದೂರುದಾರರು ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ತನಿಖಾಧಿಕಾರಿಯವರಿಗೆ ಹಾಜರುಪಡಿಸಿದ್ದು, ಅದರಲ್ಲಿನ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ, ಸಂಭಾಷಣೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್‌ಮಾಡಿಸಿ ಪ್ರಿಂಟ್ ತೆಗೆಸಿ, ಸದರಿ ಸಂಭಾಷಣೆಯನ್ನು ಲ್ಯಾಪ್‌ಟಾಪ್ ಮೂಲಕ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿ ತನಿಖಾಧಿಕಾರಿಯವರು ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಕೇಳಿದರೆ ಕೊಡಲೆಂದು ತಂದಿರುವ ಲಂಚದ ಹಣವನ್ನು

ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ದೂರುದಾರರು 3,000/– ರೂ.(500/– ರೂ. ಮುಖಬೆಲೆಯ 6 ನೋಟುಗಳನ್ನು) ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚಸಾಕ್ಷಿ–2ರವರು ಹೇಳಿದಂತೆ ಪಂಚಸಾಕ್ಷಿ–1 ರವರು ಹಾಳೆಯಲ್ಲಿ ಮತ್ತು ಸಿಬ್ಬಂದಿಯು ಪಂಚನಾಮೆಯಲ್ಲಿ ನಮೂದಿಸಿಕೊಂಡಿದ್ದು, ನಂತರ ತನಿಖಾಧಿಕಾರಿಯು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ ಪಂಚಸಾಕ್ಷಿ–2ರವರ ಮುಖಾಂತರ ದೂರುದಾರರ ಶರ್ಟಿನ ಎದೆಯ ಎಡಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ದೂರುದಾರರಿಗೆ ಲಂಚದ ಹಣವನ್ನು ಎದುರುದಾರರು ಒತ್ತಾಯಪೂರ್ವಕವಾಗಿ ಕೇಳಿದರೆ ಮಾತ್ರ ತೆಗೆದುಕೊಡುವಂತೆಯೂ, ಎದುರುದಾರರು ಲಂಚದ ಹಣವನ್ನು ಕೇಳಿದರೆ ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡುವುದು ಅಥವಾ ಯಾರ ಬಳಿ ಕೊಡಲು ತಿಳಿಸಿದರೆ ಅವರ ಕೈಗೆ ಕೊಡುವುದು ಅಥವಾ ಯಾವುದಾದರು ಸ್ಥಳದಲ್ಲಿ ಇಡಲು ತಿಳಿಸಿದರೆ, ಅಲ್ಲಿ ಇಟ್ಟು ಅವರ ಕಚೇರಿಯಿಂದ ಹೊರಬಂದು ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡುವಂತೆ ತಿಳಿಸಿದ್ದಲ್ಲದೆ ಅವರ ಬಳಿ ಹೋಗುವಾಗ ಧ್ವನಿಮುದ್ರಕವನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ನೆರಳುಸಾಕ್ಷಿಗೆ ದೂರುದಾರರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

ದಿ: 24/07/2019ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಮಧ್ಯಾಹ್ನ 12.20 ಗಂಟೆಗೆ ಎದುರುದಾರರ ಕಚೇರಿ ಬಳಿ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಮತ್ತೊಮ್ಮೆ ಸೂಚನೆಗಳನ್ನು ನೆನಪಿಸಿ, ಎದುರುದಾರರ ಬಳಿ ಕಳುಹಿಸಿಕೊಟ್ಟಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಾರ್ಯಾಲಯದ ಒಳಗಡೆ ಬಂದಿದ್ದು, ಎದುರುದಾರರು ದೂರುದಾರರನ್ನು ಮಧ್ಯಾಹ್ನ 1.00 ಗಂಟೆ ಸುಮಾರಿಗೆ ಹೊರಗಡೆ ಕರೆದುಕೊಂಡು ಬಂದು ವಿಜಯಪುರ ತಹಶೀಲ್ದಾರ್ ಕಚೇರಿಯ ಕಾಂಪೌಂಡಿನ ಪೂರ್ವಕ್ಕೆ ಇರುವ ಎರಡು ಗೇಟ್‌ಗಳಲ್ಲಿ ಉತ್ತರ ದಿಕ್ಕಿನ ಕಡೆಗೆ ಇರುವ ಗೇಟ್ ಮುಂದಿನ ಎಡಕಿನ ಕಟ್ಟೆಯ ಮೇಲೆ ಕುಳಿತುಕೊಂಡ ನಂತರ ಎದುರುದಾರರು ಲಂಚದ ಹಣವನ್ನು ಕೇಳಿದಾಗ ದೂರುದಾರರು ಅವರ

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿ.ಎಂ./3533/2021
ಪಿ.ಓ.ಎ.ಆರ್.ಇ–06

ಬಳಿಯಿದ್ದ ಪುಡಿಲೇಪಿತ ನೋಟುಗಳನ್ನು ನೀಡಿದಾಗ, ಎದುರುದಾರರು ಬಲಗೈನಿಂದ ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ, ಪ್ಯಾಂಟಿನ ಬಲಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ, ದೂರುದಾರರು ಕರ್ಚೀಫ್‌ನಿಂದ ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಿದ್ದು, ಆಗ ತನಿಖಾಧಿಕಾರಿಯವರು ಮತ್ತು ಅವರ ತಂಡ ದೂರುದಾರರ ಬಳಿ ಬಂದಾಗ ದೂರುದಾರರು ಕಟ್ಟೆಯ ಮೇಲೆ ಕುಳಿತ್ತಿದ್ದ ಎದುರುದಾರರನ್ನು ತೋರಿಸಿದ್ದು, ತನಿಖಾಧಿಕಾರಿಯವರು ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ತಯಾರಿಸಿ, ಎರಡು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಆ ದ್ರಾವಣಗಳನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ.

ತನಿಖಾಧಿಕಾರಿಯು ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸುವಂತೆ ಎದುರುದಾರರಿಗೆ ತಿಳಿಸಿದಾಗ ಅವರ ಪ್ಯಾಂಟಿನ ಬಲಗಡೆಯ ಕಿಸೆಯಲ್ಲಿದ್ದ ಹಣವನ್ನು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆಯಂತೆ ಪಂಚಸಾಕ್ಷಿ–1ರವರು ಎದುರುದಾರರು ಹಾಜರುಪಡಿಸಿದ ಹಣವನ್ನು ಪರಿಶೀಲಿಸಿದಾಗ, ಆ ನೋಟುಗಳ ವಿವರಗಳು ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ವಿವರಗಳಿಗೆ ತಾಳೆಯಾದ್ದರಿಂದ ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ಅವರ ಕಚೇರಿಯ ಒಳಗಡೆ ಇರುವ ಆಡಳಿತ ವಿಭಾಗದ ಕೊಠಡಿಗೆ ಕರೆತಂದು ತನಿಖೆ ಮುಂದುವರಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ಬೇರೆ ಪ್ಯಾಂಟಿನ ವ್ಯವಸ್ಥೆ ಮಾಡಿ ಎದುರುದಾರರು ಧರಿಸಿದ್ದ ಪ್ಯಾಂಟನ್ನು ಪಡೆದು, ಆ ಪ್ಯಾಂಟಿನ ಬಲಕಿನ ಕಿಸೆಯನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ವಶಕ್ಕೆ ಪಡೆದಿರುತ್ತಾರೆ.

ನಂತರ ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಅವರ ಸಮಜಾಯಿಷಿಯಲ್ಲಿ "ಮಹಾಲ ಭಾಗಯತ ಗ್ರಾಮದ ಸರ್ವೆ ನಂ.445/2ರ ಕುರಿತು ಶ್ರೀ. ಶಬ್ಬೀರಹ್ಮದ್ ಇಲಾಹಿ ಅತ್ತಾರ ರವರು ತಿದ್ದುಪಡಿಗಾಗಿ ಅರ್ಜಿಕೊಟ್ಟಿದ್ದು ಇರುತ್ತದೆ. ಸದರಿ ಅರ್ಜಿ ತಿದ್ದುಪಡಿ ಮಾಡಲು ಸದರಿ ಅರ್ಜಿದಾರರು ಒತ್ತಾಯಪೂರ್ವಕವಾಗಿ ಹಣಕೊಟ್ಟಿರುತ್ತಾರೆ. ನಾನೇನು ಬೇಡಿಕೆ ಇಟ್ಟಿರುವುದಿಲ್ಲ" ಎಂದು ಬರೆದುಕೊಟ್ಟಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರ ಕಚೇರಿಯಲ್ಲಿ ಹಾಜರಿದ್ದ (1) ಶ್ರೀಮತಿ. ಗಾಯಿತ್ರಿ, (2) ಶ್ರೀ. ಶಕೀಲ ಅಗಸಬಾಳರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ಪಡೆದುಕೊಂಡ ಡಿ.ವಿ.ಡಿ.ಯನ್ನು ಲ್ಯಾಪ್‌ಟಾಪ್‌ಗೆ ಹಾಕಿ ಕೇಳಿಸಿದಾಗ, ಅದರಲ್ಲಿದ್ದ ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಮಾದರಿಧ್ವನಿಯನ್ನು ಪಡೆದುಕೊಂಡು ಅದನ್ನು ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ಅದೇ ರೀತಿ ದೂರುದಾರರ ಮಾದರಿಧ್ವನಿಯನ್ನು ಪಡೆದುಕೊಂಡು ಅದನ್ನು ಸಹ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರನ್ನು ದಸ್ತಗಿರಿ ಮಾಡಿ, ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

iii) ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ವಶಪಡಿಸಿಕೊಂಡ ವಸ್ತುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ.

iv) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯು ದಿ: 28/01/2022ರಂದು ಜಾರಿಯಾಗಿರುತ್ತದೆ. ಸಾಕಷ್ಟು ಕಾಲಾವಕಾಶ ನೀಡಿದರೂ ಎದುರುದಾರರಿಂದ ಯಾವುದೇ ಸಮಜಾಯಿಷಿ ಬಂದಿರುವುದಿಲ್ಲ.

ಎದುರುದಾರರಿಂದ ತನಿಖಾಧಿಕಾರಿಯವರು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಪ್ತಲೀನ್ ಅಂಶ ಇರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಟ್ರ್ಯಾಪ್ ಸಮಯದಲ್ಲಿ ನೀಡಿದ ಸಮಜಾಯಿಷಿಯ ಅಂಶಗಳು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರಾದ ಶ್ರೀ. ಮಹಮದ್‌ರಫೀಕ್ ಮಹಿಬೂಬ ಗೋಳಸಂಗಿ ಬಿನ್ ಮಹಿಬೂಬ ಗೋಳಸಂಗಿ, ಪ್ರಥಮ ದರ್ಜೆ ಸಹಾಯಕರವರ ನಿವೃತ್ತಿ ದಿ: 31/07/2034 ಆಗಿರುತ್ತದೆ. ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ

ಸಂ:ಕಂಪ್ಲೇಂಟ್/ಉಪಲೋಕ್/ಬಿ.ಜಿ.ಎಂ./3533/2021
ಪಿ.ಓ.ಎ.ಆರ್.ಇ–06

ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

09/9/22

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.